ಶ್ರೀ ಸಿ.ಎಂ. ಉದಾಸಿ : ಇದನ್ನು ಮೇ ತಿಂಗಳೊಳಗೆ ಸಂಪೂರ್ಣ ಮುಗಿಸುವಂಥ ಕೆಲಸ ಮಾಡುತ್ತೇವೆ, ಈ ನಿಟ್ಟಿನಲ್ಲಿ ಮಾನ್ಯ ಸದಸ್ಯರು ದಯಮಾಡಿ ಸಹಕರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ : ಇದು ಚೌಕಾಸಿ ಮಾಡುವುದಲ್ಲ.

ಉಪಾಧ್ಯಕ್ಷರು : ಮೇ ತಿಂಗಳೊಳಗೆ ಮುಗಿಸಿಕೊಡುತ್ತೇನೆಂದು ಸಚಿವರು ಹೇಳಿದ್ದಾರಲ್ಲ. ಪ್ರತಾಪಚಂದ್ರಶೆಟ್ಟಿಯವರೆ, ನೀವು 2-3 ಬಾರಿ ವಿಧಾನಸಭೆಗೆ ಆರಿಸಿ ಬಂದಿದ್ದೀರಿ. ನೀವು ಹೇಳಿದಂತೆ ಅವರು ಉತ್ತರ ಕೊಡುವುದಕ್ಕಾಗುವುದಿಲ್ಲ. ಅವರು ಪರಿಣಾಮಕಾರಿಯಾಗಿ ಕೆಲಸ ಮಾಡುತ್ತೇವೆಂದು ಸ್ಪಷ್ಟವಾಗಿ ಹೇಳಿದ್ದಾರೆ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ : ನಾನು ಅದಲ್ಲ ಕೇಳುವುದು. ಇದರಲ್ಲಿ ಚೌಕಾಸಿ ಮಾಡತಕ್ಕಂಥಾದ್ದೇನೂ ಇಲ್ಲ.

ಉಪಾಧ್ಯಕ್ಷರು : ಅವರು ಚೌಕಾಸಿ ಎಂದು ಹೇಳಲಿಲ್ಲ, ನೀವೇಕೆ ತಲೆ ಕೆಡಿಸಿಕೊಳ್ಳುತ್ತೀರಿ. ಮೇ ತಿಂಗಳೊಳಗೆ ಕೆಲಸ ಮುಗಿಸಿಕೊಡುವುದಾಗಿ ಹೇಳಿದ್ದಾರೆ.

ಶ್ರೀ ಸಿ.ಎಂ. ಉದಾಸಿ : ಮಾನ್ಯ ಉಪಾಧ್ಯಕ್ಷರೆ, ಅತಿ ಶೀಘ್ರದಲ್ಲಿಯೇ ಮುಗಿಸಬೇಕೆನ್ನುವ ಗುರಿಯಿಂದ ಟಾರ್ ಖರೀದಿಗಾಗಿ ಇವೊತ್ತು ಹಣ ಬಿಡುಗಡೆ ಮಾಡಲಾಗಿದೆ.

ಗುಳೇದಗುಡ್ಡ ನಗರದಲ್ಲಿ ಅರಣ್ಯ ನರ್ಸರಿ.

193 - ಶ್ರೀ ರಾಜಶೇಖರ ವಿ. ಶೀಲವಂತ (ಗುಳೇದಗುಡ್ಡ) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಅರಣ್ಯ ಇಲಾಖೆಯಿಂದ ಗುಳೇದಗುಡ್ಡ ನಗರದಲ್ಲಿ ನರ್ಸರಿ ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದವರ ಮುಂದಿದೆಯೇ?*

ಆ) *ಇದ್ದರೆ, ಅದರ ಅಂದಾಜು ವೆಚ್ಚ ಎಷ್ಟು? ಅದಕ್ಕಾಗಿ 1998-99ನೇ ಸಾಲಿಗೆ ಎಷ್ಟು ಹಣ ಒದಗಿಸಲಾಗಿದೆ? ಯಾವಾಗ ಪ್ರಾರಂಭಿಸಲಾಗುವುದು?*

ಶ್ರೀ ಡಿ. ಮಂಜುನಾಥ್ (ಅರಣ್ಯ ಸಚಿವರು) :

ಅ) ಹೌದು.

ಆ) ಅಂದಾಜು ವೆಚ್ಚ ಪಟ್ಟಿಯನ್ನು ತಯಾರಿಸಲಾಗುತ್ತಿದೆ. 1998-99ನೇ ಸಾಲಿನಲ್ಲಿ ರೂ. 1 ಲಕ್ಷ ಅನುದಾನವನ್ನು ಒದಗಿಸಲಾಗಿದೆ ಮತ್ತು ಕೆಲಸವನ್ನು ಈ ಸಾಲಿನಲ್ಲಿ ಪ್ರಾರಂಭಿಸಲಾಗುವುದು.

ಶ್ರೀ ರಾಜಶೇಖರ ವಿ. ಶೀಲವಂತ : ಮಾನ್ಯ ಉಪಾಧ್ಯಕ್ಷರೆ, ನಾನು ಹೇಳಿರುವ ಪ್ರಶ್ನೆಗಳಿಗೆ ಸಚಿವರು ಉತ್ತರ ಒದಗಿಸಿದ್ದು, ಉತ್ತರದಲ್ಲಿ ಅಂದಾಜು ವೆಚ್ಚ ಪಟ್ಟಿಯನ್ನು ತಯಾರಿಸಲಾಗುತ್ತಿದೆ. 1998-99ನೇ ಸಾಲಿನಲ್ಲಿ ಒಂದು ಲಕ್ಷ ರೂಪಾಯಿ ಅನುದಾನ ಒದಗಿಸಿಲಾಗಿದ್ದು ಕೆಲಸವನ್ನು ಈ

ಸಾಲಿನಲ್ಲಿ ಪ್ರಾರಂಭಿಸಲಾಗುವುದೆಂದು ಹೇಳಿದ್ದಾರೆ. ಆದರೆ, ಒಂದು ಲಕ್ಷ ರೂಪಾಯಿಗಳ ಅನುದಾನದಲ್ಲಿ ಸದರಿ ಕೆಲಸ ಯಾವ ರೀತಿ ಆಗಬೇಕು? ಮತ್ತು ನರ್ಸರಿ ಬಗ್ಗೆ ಏನು ಕೇಳಿದ್ದೇವೆ, ಅದು ಮಳೆಗಾಲದ ಹೊತ್ತಿಗೆ ಶುರುವಾದರೆ ಅಲ್ಲಿ ಪ್ಲಾಂಟೇಶನ್ ಮಾಡುವುದಕ್ಕೆ ಒಂದು ರೀತಿಯಲ್ಲಿ ಅನುಕೂಲವಾಗುತ್ತದೆ. ಅದು ಬಿಟ್ಟರೆ ಒಂದು ಲಕ್ಷ ರೂಪಾಯಿ ಅನುದಾನ ಒದಗಿಸಿದರ ಅಲ್ಲಿ ಲೆವೆಲಿಂಗ್ ಮಾಡುವುದಕ್ಕಾಗುವುದಿಲ್ಲ, ಪಿಟ್‌ಗಳನ್ನು ಸಹ ತೆಗೆಯುವುದಕ್ಕಾಗುವುದಿಲ್ಲ. ಅದರ ಸಲುವಾಗಿ 1998-99ನೇ ಸಾಲಿನಲ್ಲಿ ಕೊಟ್ಟಿರುವ ಸದರಿ ಅನುದಾನ ಅಂತಿಮವೇ? ಅಥವಾ ಈ ಕುರಿತ ಅಂದಾಜು ವೆಚ್ಚದ ಪಟ್ಟಿ ತಯಾರಾದ ನಂತರ ಅದನ್ನು ನೋಡಿಕೊಂಡು ಇದಕ್ಕಿಂತ ಜಾಸ್ತಿ ಅನುದಾನ ಕೊಡುತ್ತೀರಾ ಎನ್ನುವುದನ್ನು ಮಾನ್ಯ ಮಂತ್ರಿಗಳು ನಿಖರವಾಗಿ ತಿಳಿಸಬೇಕು.

ಶ್ರೀ ಡಿ. ಮಂಜುನಾಥ್ : ಮಾನ್ಯ ಉಪಾಧ್ಯಕ್ಷರೆ, ಗುಳೇದಗುಡ್ಡ ನಗರದಲ್ಲಿ ಒಂದು ನರ್ಸರಿ ಪ್ರಾರಂಭಿಸಬೇಕೆಂದು ಮಾನ್ಯ ಸದಸ್ಯರು ಕೇಳುತ್ತಿದ್ದಾರೆ. ಅದರ ಅವಶ್ಯಕತೆಯೂ ಇದೆ. ನರ್ಸರಿ ಪ್ರಾರಂಭಿಸುವ ದಿಸೆಯಲ್ಲಿ ಈಗಾಗಲೇ ಕೆಲಸ ಶುರು ಮಾಡಿದ್ದು, ಅದಕ್ಕೆ 1998-99ನೇ ಸಾಲಿಗೆ ಒಂದು ಲಕ್ಷ ರೂಪಾಯಿಗಳನ್ನು ಕೂಡ ಬಿಡುಗಡೆ ಮಾಡಿದ್ದೇವೆ. ಬಾದಾಮಿ ಪಕ್ಕದಲ್ಲಿ ಒಂದು ಒಳ್ಳೆಯ ನರ್ಸರಿ ಇದ್ದು ಅದನ್ನು ಮಾನ್ಯ ಸದಸ್ಯರು ನೋಡಿದ್ದಾರೆ. ಅದೇ ರೀತಿ ಗುಳೇದಗುಡ್ಡದಲ್ಲೂ ಮಾಡುವುದಕ್ಕೆ ಎಲ್ಲಾ ರೀತಿಯ ಲೆಕ್ಕಾಚಾರ ಹಾಕಿದ್ದೇವೆ. ಅಂದರೆ, ನರ್ಸರಿ ಪ್ರಾರಂಭಿಸುವುದಕ್ಕೆ ಎಷ್ಟು ಹಣ ಬೇಕಾಗುತ್ತದೆ ಮುಂತಾದ ವಿಚಾರಗಳನ್ನು ಗಮನಿಸಿ ಈ ವರ್ಷ ಪ್ರಾರಂಭ ಮಾಡುವವರಿದ್ದೇವೆ. ಈ ನಿಟ್ಟಿನಲ್ಲಿ ಕಾರ್ಯೋನ್ಮುಖರಾಗುವುದಕ್ಕೆ ನಮ್ಮ ಎಲ್ಲಾ ಅಧಿಕಾರಿಗಳಿಗೂ ತಿಳಿಸಲಾಗಿದೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷರೆ, ಈಗ ನಾವೇನಾದರೂ ಸದನದಲ್ಲಿ ಸರ್ಕಾರದ ವಿರುದ್ಧ ಅವಿಶ್ವಾಸ ನಿರ್ಣಯ ಮಂಡಿಸಿದರೆ, ಅವರು ಹನ್ನೆರಡು ಜನ ಮಾತ್ರ ಇದ್ದಾರೆ. ಇದರ ಬಗ್ಗೆ ನಿಮ್ಮ ಸಲಹೆ ಹೇಳಿ. ತಾವು ಅವಿಶ್ವಾಸ ನಿರ್ಣಯ ಮಂಡಿಸಿ ಎನ್ನುವುದಾದರೆ ಮಂಡಿಸುತ್ತೇವೆ.

ಶ್ರೀ ಕೆ.ಎಸ್. ಈಶ್ವರಪ್ಪ : ಅವರೇ ಅವರ ಸರ್ಕಾರವನ್ನು ಬೀಳಿಸಬೇಕೆನ್ನುವ ಉದ್ದೇಶ ಇರುವಂತಿದೆ.

ಉಪಾಧ್ಯಕ್ಷರು : ನೀವು ಅವಿಶ್ವಾಸ ನಿರ್ಣಯ ಮಂಡಿಸುವುದಿಲ್ಲವೆನ್ನುವ ಆತ್ಮ ವಿಶ್ವಾಸ, ಖಾತ್ರಿ ನನಗಿದೆ.

ಶ್ರೀ ವಾಟಾಳ್ ನಾಗರಾಜ್ : ನಿಮ್ಮ (ಸರ್ಕಾರದ) ಪರಿಸ್ಥಿತಿ ಹೀಗಾಗಬಾರದು.

ಶ್ರೀ ಬಿ.ಎಸ್. ಯಡಿಯೂರಪ್ಪ : ಪ್ರಶ್ನೋತ್ತರ ವೇಳೆ ನಡೆಯುತ್ತಿರುವ ಸಂದರ್ಭದಲ್ಲಿ ಆಡಳಿತ ಪಕ್ಷದಲ್ಲಿ ಏನಾಗಿದೆ? ಪ್ರಶ್ನೆಗಳಲ್ಲಿ ಬಹಳ ಮಹತ್ವವಾದ ವಿಷಯಗಳಿವೆ. ಇಂತಹ ಸಂದರ್ಭದಲ್ಲಿ ಆಡಳಿತ ಪಕ್ಷದಲ್ಲಿ 12-13 ಜನರೂ ಇಲ್ಲದಿದ್ದರೆ, ನಾವು ಬೆಳಗ್ಗೆಯಿಂದಲೂ ಗಮನಿಸುತ್ತಿದ್ದೇವೆ, ಏಕೆ ಹೀಗೆ? ಮಾನ್ಯ ಮುಖ್ಯಮಂತ್ರಿಗಳಂತೂ ತಮಗೆ ಆರೋಗ್ಯ ಸರಿಯಿಲ್ಲದಿರುವುದರಿಂದ ಚೆಕ್-ಅಪ್‌ಗೆ ಹೋಗುತ್ತೇನೆಂದು ಹೇಳಿದರು. ಆದರೆ, ಉಳಿದಿರುವ ಉಪ ಮುಖ್ಯಮಂತ್ರಿಗಳಿಗೆ ಆರೋಗ್ಯ ಸರಿ ಇಲ್ಲವೇ? ಬೇರೆ ಮಂತ್ರಿಗಳ ಆರೋಗ್ಯ ಸರಿ ಇಲ್ಲವೇ? ಅವರಿಗೆಲ್ಲಾ ಏನಾಗಿದೆ? ಎಲ್ಲಿ ಹೋಗಿದ್ದಾರೆ?

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಪ್ರಕಾಶ್‌ರವರೆ, ನೀವು ಪ್ರಾಮಾಣಿಕರಾಗಿ ಹೇಳುತ್ತೀರೆಂದು ತಿಳಿದಿದ್ದೇನೆ. ಸರ್ಕಾರಕ್ಕೇನಾದರೂ ತೊಂದರೆಯಾಗಿದೆಯೇ?

ಶ್ರೀ ಕೆ.ಎಸ್. ಈಶ್ವರಪ್ಪ : ಬೆಳಿಗ್ಗೆ ಆರೋಗ್ಯ ಇಲಾಖೆ ಬಗ್ಗೆ ಚರ್ಚೆಯಾಗುತ್ತಿತ್ತು, ಸರ್ಕಾರಕ್ಕೆನಾದರೂ ಆರೋಗ್ಯ ಕೆಟ್ಟು ಹೋಗಿದೆಯೇ? ಇದಕ್ಕೆ ಮುಖ್ಯಮಂತ್ರಿಗಳು ಹೇಳುತ್ತಾರೋ, ಉಪ ಮುಖ್ಯಮಂತ್ರಿಗಳು ಹೇಳುತ್ತಾರೋ, ಆರೋಗ್ಯ ಸಚಿವರು ಹೇಳುತ್ತಾರೋ, ಇಡೀ ಜನತಾ ದಳ ಸರ್ಕಾರ ಹೇಳುತ್ತದೋ? ಒಟ್ಟಿನಲ್ಲಿ ಈ ಸರ್ಕಾರದ ಆರೋಗ್ಯ ಸರಿ ಇದೆಯೇ? ಇಲ್ಲವೇ? ಎಂಬುದೇ ಪ್ರಶ್ನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಸರ್ಕಾರ ಹೋಗಬೇಕೆನ್ನುವುದು ಅವರ ಆಸೆ. ನಾವ್ಯಾರೂ ಸರ್ಕಾರವನ್ನು ಬೀಳಿಸುವುದಕ್ಕೆ ಹೋಗುವುದಿಲ್ಲ. ಆ ಕಾಲ ಹತ್ತಿರ ಬರುತ್ತಿದೆ. ಆದರೆ, ಈಗ ಏಕೆ ಈ ಪರಿಸ್ಥಿತಿ ಬಂದಿದೆ? ಇದಕ್ಕೆ ನಾಣಯ್ಯನವರು ಹೇಳುತ್ತಾರೆಯೇ? ಏನಾಗಿದೆ? ಏಕೆ ಈ ತರಹ ಒದ್ದಾಡುತ್ತಿದ್ದೀರಿ? ನಿಮ್ಮ ಸ್ಥಿತಿ ಏನು?

ಶ್ರೀ ಎಂ.ಪಿ. ಪ್ರಕಾಶ್ : ಯಾರ ಸರ್ಕಾರ ಯಾವಾಗ ಬೀಳುತ್ತದೆ, ಯಾವಾಗ ಹತ್ತಿರವಾಗುತ್ತದೆಂಬುದು ತಮಗೂ ಗೊತ್ತಿದೆ, ನಮಗೂ ಗೊತ್ತಿದೆ. ಆದುದರಿಂದ, ಈ ವಿಷಯದ ಬಗ್ಗೆ ಹೆಚ್ಚು ಪ್ರಸ್ತಾಪ ಮಾಡದೆ ತಾವು ಏನು ಸಹಕಾರ ಕೊಟ್ಟಿದ್ದೀರಿ, ಅದಕ್ಕೆ ನಮ್ಮ ಧನ್ಯವಾದಗಳು. ನಮ್ಮ ಪಕ್ಷದ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಹಾಜರಿಲ್ಲದಿರುವುದಕ್ಕೆ ವಿಷಾದ ವ್ಯಕ್ತಪಡಿಸುತ್ತೇನೆ, ಇದು ಸದನಕ್ಕೆ ಅಗೌರವ ತೋರಿಸುವ ಮಾತಲ್ಲ. ತಮ್ಮ ಸಲಹೆ ನಿಜವಾಗಿಯೂ ಯೋಗ್ಯವಾದುದಾಗಿದೆ. ನಮ್ಮ ಸಚೇತಕರು ಮಾನ್ಯ ಸದಸ್ಯರುಗಳನ್ನು ಹುಡುಕಿಸಿ ತರುವ ಪ್ರಯತ್ನ ಮಾಡುತ್ತಿದ್ದಾರೆ. ಸದಸ್ಯರುಗಳು ಖಂಡಿತವಾಗಿಯೂ ಬರುತ್ತಾರೆ.

ಶ್ರೀ ವಾಟಾಳ್ ನಾಗರಾಜ್ : ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು ಏನು ಮಾಡುತ್ತಿದ್ದಾರೆ? ಬೆಳಿಗ್ಗೆಯಿಂದ ಅವರು ಸದನದಲ್ಲಿಲ್ಲ. ನಿಮ್ಮ ಸರ್ಕಾರದಲ್ಲಿ ಏನು ನಡೆದಿದೆ?

ಶ್ರೀ ಎಂ.ಸಿ. ನಾಣಯ್ಯ : ನಾನು ಬೆಳಿಗ್ಗೆ ಸದನದಲ್ಲಿದ್ದಾಗ ವಾಟಾಳ್ ನಾಗರಾಜ್‌ರವರು ಇರಲಿಲ್ಲ. ಆಗ ಅವರು ಎಲ್ಲಿಗೆ ಹೋಗಿದ್ದರು? ಆಗ ನಿಮ್ಮ ಹತ್ತಿರ ಮಾತನಾಡಬೇಕೆಂದು ಬಯಸಿದ್ದೆ, ನೀವು ಇರಲಿಲ್ಲ.

ಶ್ರೀ ವಾಟಾಳ್ ನಾಗರಾಜ್ : ತಮ್ಮನ್ನು ಮತ್ತೊಂದು ಬಾರಿ ವಿಧಾನ ಪರಿಷತ್ತಿಗೆ ಆಯ್ಕೆ ಮಾಡಲಾಗುತ್ತಿದ್ದು ಕೆಲವರಿಗೆ ಹೇಳಿ ಎಂದು ನೀವೇ ನಮಗೆ ಹೇಳಿದ್ದಿರಲ್ಲ ಅಷ್ಟೇ ಬೇರೆ ವಿಚಾರ ಏನೂ ಇಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ : ಅಂದರೆ, ಸರ್ಕಾರ ಬೀಳಿಸುವುದಕ್ಕೆ ಅಲ್ಲಿರುವುದಕ್ಕೆ ಪ್ರಯತ್ನ ಸರ್ಕಾರ ಉಳಿಸುವುದಕ್ಕೆ ಇವರ ಪ್ರಯತ್ನ.

ಶ್ರೀ ಎಂ.ಸಿ. ನಾಣಯ್ಯ : ನಮ್ಮ ಸರ್ಕಾರವನ್ನು ಉರುಳಿಸುವುದಕ್ಕೆ ಉಳಿಸುವುದಕ್ಕೆ ಬಹುಶಃ ಮುಖ್ಯಮಂತ್ರಿಗಳು ಬಹಳಷ್ಟು ಸಲ ಹೇಳಿದ್ದಾರೆ. ಅಂತಹ ಸಂದರ್ಭ ಬಂದಾಗ ಉತ್ತರ ಹೇಳೋಣ.

ಉಪಾಧ್ಯಕ್ಷರು : ಮಾನ್ಯ ರಾಜಶೇಖರ ಶೀಲವಂತರವರೆ, ನರ್ಸರಿ ಪ್ರಾರಂಭಿಸಲು ಒಂದು ಲಕ್ಷ ರೂಪಾಯಿಗಳ ಅನುದಾನ ಒದಗಿಸಲಾಗಿದೆಯೆಂದು ಮಾನ್ಯ ಸಚಿವರು ಹೇಳಿದ್ದಾರಲ್ಲ. ನೀವು ಈಗ ಹೊಸ ಸದಸ್ಯರಾಗಿದ್ದೀರಿ, ಒಂದೇ ತಿಂಗಳಿನಲ್ಲಿ ಎಲ್ಲವನ್ನೂ ಮಾಡುವುದಕ್ಕಾಗುವುದಿಲ್ಲ, ಸ್ವಲ್ಪ ಸಮಾಧಾನದಿಂದ ಕೇಳಿ.

ಶ್ರೀ ಡಿ. ಮಂಜುನಾಥ್ : ಬೇಕಾದರೆ ನಾನು ಅಲ್ಲಿಗೆ ಬರುತ್ತೇನೆ, ಏನು ಮಾಡಬೇಕೆಂಬುದನ್ನು ನೋಡೋಣ.

ಮೀನುಗಾರರಿಗೆ ಮನೆಗಳನ್ನು ಒದಗಿಸುವುದು

194 -(1041) ಶ್ರೀ ಬಿ. ಶಿವರಾಂ (ಗಂಡಸೀ) : ಮಾನ್ಯ ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *1996-97, 97-98 ಮತ್ತು 98-99ನೇ ಸಾಲುಗಳಲ್ಲಿ ರಾಜ್ಯದಲ್ಲಿನ ಮೀನುಗಾರರಿಗೆ ಮನೆಗಳನ್ನು ಒದಗಿಸಲು ಹೊಂದಿದ್ದ ಗುರಿ ಮತ್ತು ಸಾಧಿಸಿದ ಪ್ರಗತಿ ಎಷ್ಟು? (ಜಿಲ್ಲಾವಾರು ಮಾಹಿತಿ ಒದಗಿಸುವುದು).*

ಆ) *ಮನೆಯ ಬೇಡಿಕೆಗಾಗಿ ಇಲಾಖೆಗೆ ಬಂದಿರುವ ಪ್ರಸ್ತಾಪನೆಗಳೆಷ್ಟು? ಅವುಗಳಿಗೆ ಮಂಜೂರಾತಿ ದೊರೆಯುತ್ತದೆಯೇ ಮತ್ತು ತೆಗೆದುಕೊಂಡಿರುವ ಕ್ರಮಗಳೇನು?*

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ (ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು) :

ಅ)	ಆರ್ಥಿಕ		ಭೌತಿಕ	
	ಗುರಿ	ಸಾಧನೆ	ಗುರಿ	ಸಾಧನೆ
1996-97	360.00	60.00	710 ಉಳಿಕೆ ಮನೆಗಳು 900 ಹೊಸ ಮನೆಗಳು	 400 ಮನೆಗಳು
1997-98	300.00	285.80	650 ಹೊಸ ಮನೆಗಳು 1110 ಮನೆಗಳಿಗೆ ಉಳಿಕೆ ಹಣ ಬಿಡುಗಡೆ	650 ಹೊಸ ಮನೆಗಳು 840 ಮನೆಗಳಿಗೆ ಉಳಿಕೆ ಹಣ ಬಿಡುಗಡೆ
1998-99	200.00	-	920 ಮನೆಗಳಿಗೆ ಉಳಿಕೆ ಹಣ. 850 ಹೊಸಮನೆಗಳು	ಇನ್ನೂ ಆಗಿಲ್ಲ.
			(ಜಿಲ್ಲಾವಾರು ಮಾಹಿತಿ ಲಗತ್ತಿಸಲಾಗಿದೆ)	

ಆ) ಒಟ್ಟು ಸ್ವೀಕೃತವಾಗಿರುವ 8894 ಅರ್ಜಿಗಳಲ್ಲಿ 3449 ಮನೆಗಳಿಗೆ ಮಂಜೂರಾತಿ ನೀಡಲಾಗಿದ್ದು, ಉಳಿದ ಮನೆಗಳನ್ನು ಹಂತ ಹಂತವಾಗಿ ಅನುದಾನದ ಲಭ್ಯತೆಗೆ ಅನುಗುಣವಾಗಿ ಮಂಜೂರಾತಿ ನೀಡಲಾಗುವುದು.